Sl. No.	Departments coming under the control of Zilla parishad	No. of group 'D' posts that that are vacant in various Depts under the control of Zilla Parishad	Out of which No. of them that are filled temprarily by appointing on daily wages.
1.	Zilla Parishad, Kolar	Nil	Nil
2.	Mandal Panchayats	Nil	Nil
3.	Taluk Panchayar Samithis	3	1
4.	Executive Engineer, Zilla Parishad Engineering Division.	22	—
5.	Education Department	36	—
6.	Social Welfare Department	39	33
7.	Women and Children Development.	3	1
8.	Youth Service and Sports Deparment	Nil	Nil
9.	Health and Family Welfare.	37	Nil
10.	Horticulture Department	Nil	Nil
11.	Social Forestry	Nil	Nil
12.	Backward Classes and Minoritie	41	
13.	Mines and Geology	Nil	Nil
14.	Animal Husbandary and Vety. Services.	41	Nil
15.	Khadi and Village Industries.	5	Nil
16.	Fisheries	2	Nil
17.	Sericulture	Nil	Nil
18.	Soil Conservation	Nil	Nil
19.	Agriculture	11	Nil
	Total	240	92

ವಯೋವೃದ್ಧ ಪತ್ರಕರ್ತರು ಕ್ಲಿಷ್ಟ ಪರಿಸ್ಥಿತಿಯಲ್ಲಿರುವ ಬಗ್ಗೆ

1905-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆಲವರು ವಯೋವೃದ್ಧ ಪತ್ರಕರ್ತರು ಕ್ಲಿಷ್ಟ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಅರ್ಹ ಪತ್ರಕರ್ತರಿಗೆ ಮಾಸಾಶನ ಮಂಜೂರು ಮಾಡುವ ಯೋಜನೆ ಇದೆಯೇ?*

ಇ) ಇಲ್ಲದಿದ್ದಲ್ಲಿ ಅರ್ಹ ಪತ್ರಕರ್ತರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರ ಸಮಿತಿಯನ್ನು ರಚಿಸುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ನೆಲಮಂಗಲ ಟೌನ್‌ನಲ್ಲಿ ಕ್ರೀಡಾಂಗಣ ನಿರ್ಮಾಣ

1937 - ಶ್ರೀ ಅಂಜನಾ ಮೂರ್ತಿ (ನೆಲಮಂಗಲ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನ್‌ನಲ್ಲಿ ಸ್ಥಳೀಯ ಶಾಸಕರಿಂದ ಖಾಲಿ ಇರುವ ಆಟದ ಮೈದಾನದಲ್ಲಿ ಒಂದು ಕ್ರೀಡಾಂಗಣ ಬೇಕೆಂದು ಸರ್ಕಾರಕ್ಕೆ ಒಂದು ಮನವಿ ಬಂದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು ಕ್ರೀಡಾಪಟುಗಳ ಹಿತದೃಷ್ಟಿಯಿಂದ ಮನವಿಯನ್ನು ಪರಿಗಣಿಸುವುದೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು.

ಆ) ಹೌದು, ಸರ್ಕಾರದ ಪರಿಶೀಲನೆಯಲ್ಲಿದೆ.

ಔರಾದ್ ತಾಲ್ಲೂಕಿನಲ್ಲಿ ಸ್ಟೇಡಿಯಂ ನಿರ್ಮಾಣ

1909-ಶ್ರೀ ಗುರುಪಾದಪ್ಪ ನಾಗಮಾರ್ಪಲ್ಲಿ (ಔರಾದ್) : ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಸರ್ಕಾರದ ವತಿಯಿಂದ ಸ್ಟೇಡಿಯಂ ನಿರ್ಮಿಸಲಾಗಿದೆಯೆ?

ಆ) ಇಲ್ಲದಿದ್ದರೆ ಹಿಂದುಳಿದ ತಾಲ್ಲೂಕಾದ ಔರಾದ್‌ದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸುವ ಸಲುವಾಗಿ ಸರ್ಕಾರದಿಂದ ಒಂದು ಸ್ಟೇಡಿಯಂ ನಿರ್ಮಿಸುವ ಬಗ್ಗೆ ಸರ್ಕಾರದ ಪರಿಶೀಲಿಸುತ್ತಿದೆಯೆ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಇಲ್ಲ.

ಆ) ಹೌದು.

ಶೇರವಾಡ ಸವಣೂರು ರಸ್ತೆಯ ದುರಸ್ತಿ

1911-ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?